(2) ಹುಳಿಯಾರದಲ್ಲಿ ಕಾಲರದಿಂದ ಜನ ಸತ್ತಿರುವುದು

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಅತ್ಯಂತ ಜರೂರಾದ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಜಿಲ್ಲೆಯ ಹುಳಿಯಾರದಲ್ಲಿ ಕಾಲರಾದಿಂದ ೫ ಜನ ಮೃತಪಟ್ಟಿದ್ದಾರೆ. ಇದು ಬಹುಬೇಗ ಎಲ್ಲ ಕಡೆ ಹರಡುವುದರಿಂದ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಏಕೆಂದರೆ, ಪಕ್ಕದಲ್ಲಿ ನಮ್ಮ ತಾಲ್ಲೂಕಿದೆ. ಮಳೆ ಇಲ್ಲದೆ ಇರುವುದರಿಂದ ಕಾಲರಾ ಜರೂರಾಗಿ ಹರಡುತ್ತಿರುವುದರಿಂದ ವೈದ್ಯಕೀಯ ನೆರವು ತುರ್ತಾಗಿ ಅತ್ಯವಶ್ಯಕವಾಗಿ ಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಗಮನ ಹರಿಸಬೇಕು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷರೆ, ಒಂದು ವಾರದ ಹಿಂದೆ ನಾನು ಹುಳಿಯಾರಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೆ. ಅಲ್ಲಿ ಕಾಲರಾ ಹೆಚ್ಚಾತಕ್ಕ ಭಯ ಇದೆ, ಈಗಾಗಲೇ ಕೆಲವು ಕೇಸುಗಳನ್ನು ಗುರುತಿಸಿದ್ದೇವೆಂದು ಹೇಳಿದರು. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿದಾಗ ಅಲ್ಲಿ ಡಿಟಿಟಿ ಪೌಡರ್ ಹೊಡೆದು ರಕ್ಷಣೆ ಮಾಡತಕ್ಕ ಕ್ರಮ ಇದೆ ಅಂದರು. ಅಲ್ಲಿ ಏನಾಗಿದೆ ಎಂದರೆ. ಡಿಟಿಟಿ ಹೊಡೆದರೂ ಇಮ್ಯೂನ್ ಆಗಿ ಏನೂ ಪ್ರಯೋಜನವಾಗದ ಪರಿಸ್ಥಿತಿ ಇದೆ. ಅಲ್ಲಿ ಉತ್ತಮವಾದ ಪೌಡರ್ ಸಿಗುತ್ತಿಲ್ಲವೆಂದು ಹೇಳಿದರು. ಹಿಂದಿನ ಸಭೆಯಲ್ಲಿ ಕೂಡ ಗಮನ ಸೆಳೆಯುವ ಸೂಚನೆ ಮೂಲಕ ಹುಳಿಯಾರಿನ ಕೆರೆಯ ವಾಟರ್ ಸಪ್ಲೈ ತಪ್ಪಿ ಹೋಗಿ ೩-೪ ತಿಂಗಳಾಯಿತು. ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೆಟ್ಟು ಹೋಗಿರತಕ್ಕ ಕೆರೆಯ ರಿಪೇರಿ ಮಾಡುವಷ್ಟರಲ್ಲಿ ೪ ತಿಂಗಳಾಯಿತು. ಆ ಕೆರೆಯ ನೀರನ್ನು ಬಿಟ್ಟರೆ ಅಲ್ಲಿ ಬೇರೆ ವ್ಯವಸ್ಥೆಯಿಲ್ಲ. ಆ ಕೆರೆಯ ನೀರು ಎಷ್ಟು ಕೆಟ್ಟುಹೋಗಿದೆ ಎಂದರೆ ಹೇಳತೀರದು. ಕೆರೆಯ ನೀರಿನ ಪರಿಸ್ಥಿತಿ ಹೇಗಿದೆ ಎಂದು ತಮಗೆ ಗೊತ್ತಿದೆ. ದನಕರುಗಳು ಸಹ ನೀರು ಕುಡಿಯುವುದು ಕಷ್ಟವಾಗಿದೆ. ಆ ಕೆರೆ ಎಷ್ಟು ದೊಡ್ಡದು ಎಂದರೆ ಸುಮಾರು ಹತ್ತಾರು ಹಳ್ಳಿಗಳು ಆ ಕೆರೆಯನ್ನು ಅವಲಂಬಿಸಿವೆ. ಅದಕ್ಕೆ ಏನಾದರೂ ತೀರ್ಮಾನ ಕೊಡುವುದಾದರೆ ಆ ಕೆರೆಯನ್ನು ರಿಪೇರಿ ಮಾಡಿಸುವ ಕೆಲಸವನ್ನು ಮೊದಲು ಮಾಡಿಸಬೇಕೆಂದು ಹೇಳುತ್ತೇನೆ. ಮತ್ತೊಂದು.....

ಅಧ್ಯಕ್ಷರು. ಭಾಷಣ ಮಾಡಬೇಡಿ. ಗಮನ ಸೆಳೆದಿದ್ದೀರಿ.

ಶ್ರೀ ಟಿ. ಬಿ. ಜಯಚಂದ್ರ.—ಅಲ್ಲಿ ಕಾಲರಾದಿಂದ ಆರು ಜನ ಸತ್ತುಹೋಗಿದ್ದಾರೆ. ನಿಜವಾಗಿಯೂ ಅಲ್ಲಿ ಸರಿಯಾದ ಮೆಡಿಸಿನ್ ಸಿಗುತ್ತಿಲ್ಲ ಎನ್ನುವುದನ್ನು ನಾನು ದೂರವಾಣಿ ಮೂಲಕ ಕನ್‌ಫರ್ಮ್ ಮಾಡಿಕೊಂಡಿದ್ದೇನೆ. ಕೂಡಲೇ ಅಧಿಕಾರಿಗಳನ್ನು ಕಳುಹಿಸಿ ಮತ್ತು ಮೆಡಿಸಿನ್ ಕಳಿಸಿ ಹೆಚ್ಚು ಸಾವು ನೋವು ಆಗುವುದಕ್ಕೆ ಅವಕಾಶ ಕೊಡದಂತೆ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದ ವೈಫಲ್ಯ ಪುನರಾವರ್ತನೆಯಾಗದಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನನಗೆ ತಿಳಿದ ಪ್ರಕಾರ ಹುಳಿಯಾರಿನಲ್ಲಿ ಸತ್ತಿರತಕ್ಕವರು ೮ ಜನ. ೧೨೦ ಜನ ಈ ಕಾಯಿಲೆಯಿಂದ ನರಳುತ್ತಿದ್ದಾರೆ. ಈ ಕಾಲರಾ ಅಲ್ಲಿ ಮಾತ್ರವಲ್ಲದೆ ಸುತ್ತಮುತ್ತ ಪ್ರಾರಂಭವಾಗುತ್ತಿದೆ. ಸರ್ಕಾರದಿಂದ ಈ ಬಗ್ಗೆ ಕೂಡಲೇ ಸರಿಯಾದ ವ್ಯವಸ್ಥೆ ಮಾಡಲಿಲ್ಲ ಎಂದರೆ ಇಡೀ ರಾಜ್ಯಕ್ಕೆ ಈ ಸೋಂಕು ಹರಡುತ್ತದೆ. ಆದ್ದರಿಂದ ಈ ಸೋಂಕು ಬೇರೆ ಕಡೆ ತಗಲದಂತೆ ವ್ಯವಸ್ಥೆ ಮಾಡಬೇಕು.

(3) ದಾವಣಗೆರೆ ತಾಲ್ಲೂಕಿನ ಶಾಮನೂರ್ ಕೆರೆಯಲ್ಲಿ ಹೆಣ ಹಾಕಿರುವ ಬಗ್ಗೆ

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಅಧ್ಯಕ್ಷರೆ, ಒಂದು ವಾರದ ಹಿಂದೆ ನಮ್ಮ ದಾವಣಗೆರೆ ತಾಲ್ಲೂಕಿನ ಶಾಮನೂರ್ ಕೆರೆಯಲ್ಲಿ ಬೆಳಗಿನ ಝಾವದಲ್ಲಿ ಕಾರಿನಲ್ಲಿ ಒಂದು ಹೆಣ ತಂದು ಹಾಕುವ ಸಂದರ್ಭದಲ್ಲಿ ಜನ ನೋಡಿ ಆ ಕಾರನ್ನು ಹಿಡಿಯಲಿಕ್ಕೆ ಬೆನ್ನಟ್ಟಿ ಹೋಗಿದ್ದಾರೆ. ಸತ್ತವನು ಪಂಜಾಬಿನಿಂದ ಬಂದಿದ್ದ ಪ್ರಸಿದ್ಧ ವೈದ್ಯ ಎಂದು ಪತ್ರಿಕೆಯಲ್ಲಿ ಪ್ರಸ್ತಾಪವಾಗಿದೆ. ಇದು ನಮ್ಮ ತಾಲ್ಲೂಕಿನಲ್ಲಿ ಆಗಿರತಕ್ಕದ್ದು. ಇದರ ಬಗ್ಗೆ ಬರೆದು ಕಳುಹಿಸಿಕೊಡುತ್ತೇನೆ. ತಾವು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಬರೆದು ಕಳುಹಿಸಿ.